ದಿನಾಂಕ 01-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿ ಶ್ರೀ ಎಂ. ಆರ್ ವಕೀಲರವರಿಂದಃ**

ಅಪಘಾತ ದಿವಸ ನಾನು ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನ ನನಗೆ ಸೇರಿರುತ್ತದೆ. ಅಪಘಾತ ದಿವಸ ವಾಹನ ಚಾಲನೆ ಮಾಡಲು ನನಗೆ ವಾಹನ ಚಾಲನಾ ಪರವಾನಿಗೆ ಇತ್ತು. ನನ್ನ ವಾಹನ ಚಾಲನಾ ಪರವಾನಿಗೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆದರೆ ಇದ್ದ ದಾಖಲೆಗಳಲ್ಲಿ ಸದ್ರಿ ವಾಹನ ಚಾಲನಾ ಪರವಾನಿಗೆ ಕಾಣಿಸುವುದಿಲ್ಲ ಎಂದರೆ ಸಾಕ್ಷಿದಾರರು ಮುಂದಿನ ತಾರೀಕಿಗೆ ನೀಡುತ್ತೇನೆ ಎಂದು ಮನವಿ ಮಾಡುತ್ತಾರೆ. ಅಪಘಾತ ಸಮಯದಲ್ಲಿ ನಾನು ಹೆಲ್ಮೆಟ್ ಧರಿಸಿದ್ದೆ. ಅಪಘಾತ ದಿವಸ ನಾನು ಕಟಪಾಡಿಯಿಂದ ಕಾಪು ಕಡೆಗೆ ಹೋಗುತ್ತಿದ್ದೆ. ಆ ಸಮಯದಲ್ಲಿ ನನ್ನ ದ್ವಿ ಚಕ್ರ ವಾಹನದಲ್ಲಿ ನನ್ನನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ಅಪಘಾತ ಪೂರ್ವದಲ್ಲಿ ಬೊಲೆರೋ ವಾಹನವನ್ನು ನಾನು ಗಮನಿಸಿಲ್ಲ. ಹಿಂದಿನಿಂದ ಬರುತ್ತಿದ್ದ ಬೊಲೆರೋ ವಾಹನ ನಾನು ನನ್ನ ಗಾಡಿಯ ಕನ್ನಡಿಯಲ್ಲಿ ಗಮನಿಸಿರುತ್ತೇನೆ. ಬೊಲೆರೋ ವಾಹನ ಕಾಪು ಕಡೆಗೆ ಹೋಗುತ್ತಿತ್ತು. ಬೊಲೆರೋ ವಾಹನದ ಯಾವ ಭಾಗಕ್ಕೆ ಜಖಂ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದ್ರಿ ಅಪಘಾತ ನನ್ನದೇ ತಪ್ಪಿ ನಿಂದ ಆಗಿರುತ್ತದೆ ಎಂದು ಪೊಲೀಸಿನವರು ಪ್ರ. ವ. ವರದಿಯನ್ನು ಸಲ್ಲಿಸಿದ ಮಾಹಿತಿ ನನಗೆ ಇರುತ್ತದೆ. ಸದ್ರಿ ಪ್ರಥಮ ವರ್ತಮಾನ ವರದಿ ನನ್ನ ವಿರುದ್ಧ ಆದ್ದರಿಂದ ನಾನು ನ್ಯಾಯಾಲಯಕ್ಕೆ ಆ ದಾಖಲೆಯನ್ನು ಸಲಿಸಲಿಲ್ಲ ಎಂದರೆ ಸರಿಯಲ್ಲ. ಪೊಲೀಸಿನವರ ಜೊತೆ ಶಾಮೀಲಾಗಿ ಬೊಲೆರೋ ವಾಹನದ ಚಾಲಕನ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಲು ಪಾತ್ರನಾಗಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ 2 ನೇ ಎದುರುದಾರರ ವಿಮಗೆ ಒಳಪಟ್ಟ ವಾಹನದ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ.

ಪಿ .ಡಬ್ಲ್ಯೂ : 1

ಅಪಘಾತವಾದ ನಂತರ ನಾನು ಅಜ್ಜರ ಕಾಡು ಆಸ್ಪತ್ರೆಗೆ ಪ್ರಥಮ ಬಾರಿ ದಾಖಲಾಗಿರುತ್ತೇನೆ. ನಂತರ ಮಾರನೇ ದಿನ ಹೆಚ್ಚಿನ ಚಿಕಿತ್ಸೆಗಾಗಿ ವೆನ್ ಲಾಕ್ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ನಂತರ ಫಾದರ್ ಮುಲ್ಲರ್ ಆಸ್ಪತ್ರೆಗೆ ದಾಖಲಾಗಿದ್ದೇನೆ. ಸದ್ರಿ ಆಸ್ಪತ್ರೆಯಲ್ಲಿ ನನಗೆ ಸಂಪೂರ್ಣ ಚಿಕಿತ್ಸೆ ಮುಗಿದ ನಂತರ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಾಯಗಳು ಸಂಪೂರ್ಣವಾಗಿ ಗುಣವಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಮುಂದುವರಿದ ಚಿಕಿತ್ಸೆ ಬಾಕಿ ಇರುವುದಿಲ್ಲ ಆದರೆ ಒಳ ಸಾಧನ ತಗೆಯಲು ಬಾಕಿ ಇರುತ್ತದೆ. ನಾನು ಕೆಎಂಸಿ ಮಣಿಪಾಲದಲ್ಲಿ ಒಳ ರೋಗಿಯಾಗಿ ದಾಖಲಾಗಿರುತ್ತೇನೆ. ನಾನು ಸದ್ರಿ ಆಸ್ಪತ್ರೆ ಗೆ ಅಪಘಾತದಿಂದ ಅದ ಗಾಯಗಳಿಗೆ ದಾಖಲಾಗಿಲ್ಲ ಬೇರೆ ಕಾರಣಕ್ಕಾಗಿ ದಾಖಲಾಗಿರುತ್ತೇನೆ ಎಂದರೆ ಸರಿಯಲ್ಲ.

ನಾನು ವೈದ್ಯಕೀಯ ಚಿಕಿತ್ಸೆಗೆ ಖರ್ಚು ಮಾಡಿದ ಬಿಲ್ಲುಗಳಿಗೆ ಹೆಲ್ತ್ ಕಾರ್ಡ್ನಿಂದ ಮರು ಪಾವತಿ ಆಗಿರುತ್ತದೆ. ಎಷ್ಟು ಹಣ ಮರುಪಾವತಿಯಾಗಿದೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನನಗೆ ಹೆಲ್ತ್ ಕಾರ್ಡ್ ನಿಂದ ಎಲ್ಲಾ ಹಣ ಮರು ಪಾವತಿಯಾಗಿದೆ ಎಂದರೆ ಸರಿಯಲ್ಲ. ನಿಪಿ 10 ಮತ್ತು 11 ನ್ನು ವೈದ್ಯರು ನನ್ನ ಅನುಕೂಲಕ್ಕೆ ತಕ್ಕಂತೆ ಹೇಳಿದ ಪ್ರಕಾರ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಅಪಘಾತದಿಂದ ಯಾವುದೇ ನಷ್ಟ ಹಾನಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಅಪಘಾತಪೂರ್ವ ದಲ್ಲಿ ಲೇಬರ್ ಕೆಲಸ ಮಾಡುತ್ತಿದ್ದೆ. ಸಂಪಾದನೆ ಬಗ್ಗೆ ನಾನು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ನನಗೆ ಹೇಳಲು ಬರುವುದಿಲ್ಲ.

ಅಪಘಾತದಿಂದ ಆದ ಗಾಯಗಳಿಗೆ ಭವಿಷ್ಯದಲ್ಲಿ ಯಾವುದೇ ವೈದ್ಯಕೀಯ ವೆಚ್ಚ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಆಸ್ಪತ್ರೆಯಲ್ಲಿ ನನ್ನನ್ನು ನೋಡಿಕೊಂಡಿದ್ದು ಅವರಿಗೆ ಆದಾಯ ನಷ್ಟ ವಾದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನೀವು ಅರ್ಜಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವಷ್ಟು ಹಣವು ಔಷಧಿಗೆ, ಆಹಾರಕ್ಕೆ, ಒಡಾಟಕ್ಕೆ ಪರಿಚಾರಕರಿಗೆ ಖರ್ಚಾಗಿಲ್ಲವೆಂದರೆ ಸರಿಯಲ್ಲ. ಅಪಘಾತವು ನನ್ನದೇ ತಪ್ಪಿನಿಂದ ಆದ ಕಾರಣ 2 ನೇ ಎದ್ರುದಾರರು ಪರಿಹಾರದ ಹಣವನ್ನು ತುಂಬಿ ಕೊಡಲು ಬಾಧ್ಯಸ್ಥರಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಂ.ಎ.ಸಿ.ಟಿ. ಉಡುಪಿ.